


# ಟೋಲ್; ಕ್ಯಾಶ್ ಎಂಟ್ರಿಗೆ ಬ್ರೇಕ್!

**ಟೋಲ್ ಕೇಂದ್ರಗಳ ಪ್ರವೇಶಾತಿಯ ಪಾವತಿ ನಿಯಮಗಳಲ್ಲಿ ಪ್ರಮುಖ ಬದಲಾವಣೆಗಳನ್ನು ಜಾರಿಗೆ ತಂದಿರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು, ಕ್ಯಾಶ್ ಎಂಟ್ರಿಗೆ ಕಡಿವಾಣ ಹಾಕಿ ಎಲ್ಲವನ್ನೂ ಆನ್‌ಲೈನ್‌ಮಯಗೊಳಿಸಿದೆ.**

**■ ಶಶಿಕುಮಾರ್ ಸಿ.**

ದೇಶದಾದ್ಯಂತ ಹೆದ್ದಾರಿಗಳಲ್ಲಿನ ಪ್ರಯಾಣವನ್ನು ಮತ್ತಷ್ಟು ಸುಲಭ ಮತ್ತು ಸರಾಗವಾಗಿಸಲು ಕೇಂದ್ರ ಸರ್ಕಾರವು ಈಚೆಗೆ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದು, ಇದು ಟೋಲ್ ಪ್ಲಾಜಾ ಅಥವಾ ಕೇಂದ್ರಗಳಲ್ಲಿನ ಟ್ರಾಫಿಕ್ ಸಮಸ್ಯೆಗೆ ಕಡಿವಾಣ ಹಾಕುವ ನಿರೀಕ್ಷೆ ಹುಟ್ಟಿಸಿದೆ.

ಫಾಸ್‌ಟ್ಯಾಗ್ ಪ್ರವೇಶಾತಿ ನಿಯಮವು ಜಾರಿಗೆ ಬಂದು ಹಲವು ವರ್ಷಗಳೇ ಕಳೆದಿದ್ದರೂ ಟೋಲ್ ಕೇಂದ್ರಗಳಲ್ಲಿ ನಗದು ಪಾವತಿ ಮೂಲಕ ಪ್ರವೇಶಾತಿ ಸ್ಥಗಿತಗೊಂಡಿರಲಿಲ್ಲ. ನಗದು ಪಾವತಿ ಮೂಲಕ ಪ್ರವೇಶ ಮಾಡುವ ವಾಹನಗಳಿಗೆ ದುಪ್ಪಟ್ಟು ಶುಲ್ಕ ವಿಧಿಸಿ ಈ ಅವಕಾಶ ಕಲ್ಪಿಸಲಾಗಿತ್ತು. ಇದರಿಂದ ಕೇಂದ್ರಗಳಲ್ಲಿನ ಒಂದೆರಡು ಲೇನ್‌ಗಳಲ್ಲಿ ವಾಹನಗಳು ಸರದಿ ನಿಲ್ಲುವುದು ಎಲ್ಲೆಡೆ ಕಂಡುಬರುತ್ತಿತ್ತು. ಇದರಿಂದ ಸಮಯ ವ್ಯರ್ಥವಾಗುವುದಲ್ಲದೇ ನಗದು ಪಾವತಿಗೆ ದುಪ್ಪಟ್ಟು ಶುಲ್ಕ ವಿಧಿಸುತ್ತಿರುವುದು ವಾಹನ ಚಾಲಕರಿಗೆ ಹೆಚ್ಚುವರಿ ಹೊರೆಯೂ ಆಗುತ್ತಿತ್ತು.

ಇದನ್ನೆಲ್ಲ ತಪ್ಪಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಈಗ ನಗದು ಪಾವತಿಗಳ ಪ್ರವೇಶಾತಿಯನ್ನು ಟೋಲ್ ಕೇಂದ್ರಗಳಲ್ಲಿ ಸ್ಥಗಿತಗೊಳಿಸಿದೆ. ಫಾಸ್‌ಟ್ಯಾಗ್ ಮೂಲಕ ಅಥವಾ ಯುಪಿಐ ಪಾವತಿ ಮೂಲಕ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆಯುವುದೀಗ ಅನಿವಾರ್ಯ. ಈ ಪ್ರವೇಶಾತಿಗೆ ಚಾಲಕರು ನಿಗದಿತ ಟೋಲ್ ಶುಲ್ಕಕ್ಕಿಂತ 0.25 ಪಟ್ಟಷ್ಟೇ ಪಾವತಿಸಬೇಕಾಗುತ್ತದೆ. ಈ ಕ್ರಮವು ದೀರ್ಘ ಸರದಿ ಸಾಲುಗಳು, ವಿವಾದಗಳು ಮತ್ತು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಗುರಿ ಹೊಂದಿದೆ ಎನ್ನುವುದು ಪ್ರಾಧಿಕಾರದ ಅಭಿಪ್ರಾಯ. ಈ ಉಪಕ್ರಮವು ಟೋಲ್ ಪ್ಲಾಜಾಗಳಲ್ಲಿ ವಾಹನ ಸಂಚಾರವನ್ನು ವೇಗಗೊಳಿಸುತ್ತದೆಯೇ ಮತ್ತು ಸಮಯವನ್ನು ಉಳಿಸುತ್ತದೆಯೇ? ಕಾದು ನೋಡಬೇಕಿದೆ.

## ವಾಹನ ಹತ್ತುವ ಮುನ್ನ ಎಚ್ಚರ

ಈ ಹೊಸ ನಿಯಮವು ಈಗಾಗಲೇ ಜಾರಿಗೆ ಬಂದಿದ್ದು, ಪ್ರಾಧಿಕಾರದ ನಿಯಮಗಳಿಗನುಸಾರ ಫಾಸ್‌ಟ್ಯಾಗ್‌ನಲ್ಲಿ ಅಗತ್ಯ ಹಣ ಇರುವುದರ ಬಗ್ಗೆ ಎಚ್ಚರವಹಿಸಬೇಕು. ಹಣವಿಲ್ಲದಿದ್ದಲ್ಲಿ ತಕ್ಷಣ ರೀಚಾರ್ಜ್ ಮಾಡಿ, ವಾಹನವನ್ನು ಹೆದ್ದಾರಿಗೆ ಇಳಿಸಬೇಕು. ರೀಚಾರ್ಜ್ ಮಾಡುವುದರ ಜೊತೆಗೆ ಫಾಸ್‌ಟ್ಯಾಗ್ ನವೀಕರಣ, ಫಾಸ್‌ಟ್ಯಾಗ್ ಇಲ್ಲದಿದ್ದಲ್ಲಿ ಯುಪಿಐ ಅಥವಾ ಆನ್‌ಲೈನ್ ಪಾವತಿ ವ್ಯವಸ್ಥೆಗೆ ಮುಂಚಿತವಾಗಿ ಸಜ್ಜಾಗುವುದು ಒಳಿತು. ಟೋಲ್ ಕೇಂದ್ರಗಳಲ್ಲಿ ಎರಡೂ ಮಾದರಿಯ ಪಾವತಿ ಆಗದೆ ಇದ್ದಲ್ಲಿ 'ಇ–ನೋಟಿಸ್' ನಿಮ್ಮ ಕೈಸೇರಲಿದೆ. ಕೊಂಚ ಎಚ್ಚರ ವಹಿಸಿದರೆ ಹೆಚ್ಚುವರಿ ಶುಲ್ಕಗಳು ಅಥವಾ ದಂಡಗಳನ್ನು ಪಾವತಿಸುವುದರಿಂದ ತಪ್ಪಿಸಿಕೊಳ್ಳಬಹುದು.

### ಫಾಸ್‌ಟ್ಯಾಗ್‌ಗೆ ಆದ್ಯತೆ ಏಕೆ?

ಟೋಲ್ ಪ್ಲಾಜಾಗಳಲ್ಲಿ ಹತ್ತಾರು ನಿಮಿಷಗಳ ಕಾಲ ವಾಹನಗಳು ಸರದಿ ನಿಲ್ಲುವುದನ್ನು ತಪ್ಪಿಸಲು ಫಾಸ್‌ಟ್ಯಾಗ್ ಪರ್ಯಾಯ ವ್ಯವಸ್ಥೆಯಾಗಿದೆ. ಜೊತೆಗೆ ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುತ್ತದೆ. ಟೋಲ್ ಶುಲ್ಕವನ್ನು ಈಗಾಗಲೇ ಫಾಸ್‌ಟ್ಯಾಗ್‌ನಲ್ಲಿ ತುಂಬಿರುವ ಹಣವನ್ನು ರೇಡಿಯೊ ಫ್ರೀಕ್ವೆನ್ಸಿ ಮೂಲಕ ಕಡಿತ ಮಾಡಲಾಗುತ್ತದೆ. ಇದು ಕ್ಷಣಾರ್ಧದಲ್ಲಿ ನಡೆದುಹೋಗುವ ಪ್ರಕ್ರಿಯೆ. ಚಾಲಕರು ತಮ್ಮ ವಾಹನಗಳನ್ನು ಹತ್ತಾರು ನಿಮಿಷ ಸರದಿಗಟ್ಟುವುದನ್ನು ಈ ಪ್ರಕ್ರಿಯೆ ತಪ್ಪಿಸುತ್ತದೆ.

ಇದಕ್ಕಿಂತ ಅತ್ಯಾಧುನಿಕ ಜಿಪಿಎಸ್ ಆಧರಿತ ಶುಲ್ಕ ಸಂಗ್ರಹ ವ್ಯವಸ್ಥೆಯನ್ನು ಹೆದ್ದಾರಿಗಳಲ್ಲಿ ಜಾರಿಗೆ ತರುವ ಪ್ರಯತ್ನವನ್ನು ಕೇಂದ್ರ ಸರ್ಕಾರವು ಈಗಾಗಲೇ ಪರಿಚಯಿಸಿದ್ದು, ಇದು ವ್ಯಾಪಕವಾಗಿ ವಿಸ್ತಾರಗೊಳ್ಳಬೇಕಿದೆ.

### ವಿಫಲವಾದರೆ ಮುಂದೇನು?

ಫಾಸ್‌ಟ್ಯಾಗ್ ಮತ್ತು ಯುಪಿಐ ಅಥವಾ ಆನ್‌ಲೈನ್ ಪಾವತಿಯು ಟೋಲ್ ಕೇಂದ್ರಗಳಲ್ಲಿ ವಿಫಲವಾದರೆ ಮುಂದೇನು ಎನ್ನುವ ಪ್ರಶ್ನೆ ಇಲ್ಲಿ ಕಾಡುತ್ತದೆ. ಅಂತಹ ಸನ್ನಿವೇಶದಲ್ಲಿ, ಪ್ರಾಧಿಕಾರ 'ಪಾವತಿಸದ ಬಳಕೆದಾರ ಶುಲ್ಕ'ಕ್ಕಾಗಿ ಹೊಸ ನಿಬಂಧನೆಯೊಂದನ್ನು ಪರಿಚಯಿಸಿದೆ. ಅದುವೇ 'ಇ–ನೋಟಿಸ್'. ಈ ನಿಬಂಧನೆಯಡಿ ಫಾಸ್‌ಟ್ಯಾಗ್ ಮತ್ತು ಆನ್‌ಲೈನ್ ಪಾವತಿಗಳೆರಡೂ ವಿಫಲವಾದರೆ ಟೋಲ್ ಪ್ಲಾಜಾ ದಾಟಿದ ನಂತರ ವಾಹನ ಮಾಲೀಕರಿಗೆ 'ಇ–ನೋಟಿಸ್' ಕಳುಹಿಸಲಾಗುತ್ತದೆ. ಈ ಸೂಚನೆಯನ್ನು ಎಸ್‌ಎಂಎಸ್, ಇಮೇಲ್ ಅಥವಾ ಮೀಸಲಿಟ್ಟ ಅಪ್ಲಿಕೇಷನ್ ಮೂಲಕ ವಾಹನ ಮಾಲೀಕರಿಗೆ ತಲುಪಿಸಲಾಗುತ್ತದೆ.

ನೋಟಿಸ್ ತಲುಪಿದ 72 ಗಂಟೆಗಳ ಒಳಗೆ ಮಾಡಿದ ಪಾವತಿಗಳಿಗೆ ಹೆಚ್ಚುವರಿ ಶುಲ್ಕಗಳನ್ನು ವಿಧಿಸಲಾಗುವುದಿಲ್ಲ ಎಂದಿರುವ ಪ್ರಾಧಿಕಾರವು, ನಿಗದಿತ ಅವಧಿ ಮೀರಿದರೆ, 72 ಗಂಟೆಗಳ ನಂತರ ಪಾವತಿ ಮಾಡಿದರೆ ಟೋಲ್ ಶುಲ್ಕದ ದುಪ್ಪಟ್ಟು ಪಾವತಿಸಲೇಬೇಕು. 72 ಗಂಟೆಗಳ ನಂತರ ಮತ್ತೊಂದು ಅವಕಾಶ ನೀಡಿರುವ ಪ್ರಾಧಿಕಾರವು ಆದಾಗ್ಯೂ ಪಾವತಿ ಮಾಡದಿದ್ದರೆ 15 ದಿನದ ನಂತರ ಬಾಕಿ ಮೊತ್ತವನ್ನು ವಾಹನ ವ್ಯವಸ್ಥೆಯಲ್ಲಿ ಅಪ್‌ಡೇಟ್ ಮಾಡಲಾಗುತ್ತದೆ. ಅದರ ನಂತರ ವಾಹನದ ಮೇಲೆ 'ಸೂಕ್ತ ನಿರ್ಬಂಧಗಳನ್ನು' ವಿಧಿಸಬಹುದು. ನಿಯಮ ಪದೇ ಪದೇ ಮೀರಿದರೆ ವಾಹನ ಜಪ್ತಿಗೂ ಕೈಹಾಕಬಹುದು. ■